ಸ್ಥಾವರಗಳು ಬಳಸಿದ ವಿದ್ಯುತ್‌ನ ಯೂನಿಟ್ಟುಗಳ ಮೇಲೆ ತೆರಿಗೆ ವಿಧಿಸಲಾಗುತ್ತದೆ ಹಾಗೂ ಸ್ಥಗಿತಗೊಂಡ ಸ್ಥಾವರಗಳಿಗೆ ವಿದ್ಯುತ್ ಬಿಲ್‌ನಲ್ಲಿ ಸ್ಥಗಿತಗೊಂಡಿದ್ದ ಅವಧಿಗೆ ತೆರಿಗೆ ವಿಧಿಸುವುದಿಲ್ಲ.

ಸಣ್ಣ ನೀರಾವರಿ ಇಲಾಖೆಯಲ್ಲಿನ ಸಿಬ್ಬಂದಿ ವರ್ಗ

3216 - ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಲ್ಲಿರುವ ಚೀಫ್ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು?

ಆ) ಪ್ರತಿಯೊಂದು ಚೀಫ್ ಇಂಜಿನಿಯರ್‌ಗಳ ಕೆಳಗಿರುವ ಸಿಬ್ಬಂದಿಯ ಹಾಗೂ ಉಳಿದ ಸೇವಾ ಸಿಬ್ಬಂದಿಗಳ ಸಂಖ್ಯೆ ಎಷ್ಟೆಷ್ಟು? ಪ್ರತಿ ತಿಂಗಳು ಅವರಿಗೆ ನೀಡುವ ಒಟ್ಟು ಸಂಬಳ ಎಷ್ಟು?

ಇ) ಪ್ರತಿಯೊಂದು ಇಂಜಿನಿಯರಿಂಗ್ ವಿಭಾಗದ ಆಡಳಿತದ ಖರ್ಚು ಎಷ್ಟೆಷ್ಟು?

ಈ) ರಾಜ್ಯದಲ್ಲಿ ಪ್ರತಿಯೊಂದು ವಿಭಾಗದ ಇಂಜಿನಿಯರ್‌ಗಳು ಮಾಡಿರುವ ಪ್ರಮುಖ 3 ವರ್ಷದ ಅಭಿವೃದ್ಧಿ ಕಾರ್ಯಕ್ರಮಗಳು ಯಾವುವು? ಮತ್ತು ಅವುಗಳಿಗೆ ಖರ್ಚು ಮಾಡಲಾದ ಹಣ ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಇಬ್ಬರು ಚೀಫ್ ಇಂಜಿನಿಯರ್‌ಗಳಿದ್ದು, ಉತ್ತರ ವಲಯ ಬಿಜಾಪುರದಲ್ಲಿ ಒಂದು ಹಾಗೂ ದಕ್ಷಿಣ ವಲಯ ಬೆಂಗಳೂರಿನಲ್ಲಿ ಒಂದು ಹುದ್ದೆಗಳು ಇರುತ್ತವೆ.

ಆ) ಪ್ರತಿ ಚೀಫ್ ಇಂಜಿನಿಯರ್‌ಗಳ ಕೆಳಗಿರುವ ಸಿಬ್ಬಂದಿಯ ವಿವರಗಳು ಕೆಳಕಂಡಂತಿವೆ.

ವಲಯ	ಸಿಬ್ಬಂದಿ ಸಂಖ್ಯೆ	ಪ್ರತಿ ತಿಂಗಳ ಸಂಬಳ
ಉತ್ತರ ವಲಯ	940	166.04 ಲಕ್ಷ ರೂ.ಗಳು
ದಕ್ಷಿಣ ವಲಯ	720	82.40 ಲಕ್ಷ ರೂ.ಗಳು

ಇ) ಪ್ರತಿ ಮಾಹೆಯಾನ ಆಡಳಿತ ವೆಚ್ಚ ಸುಮಾರು 8.50 ಲಕ್ಷ ರೂ.ಗಳು

ಈ) ಸಣ್ಣ ನೀರಾವರಿ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸಕೆರೆ ಪಿಕಪ್ ಬಂದಾರ ಹಾಗೂ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ ಕೆಳಕಂಡ ಪ್ರಗತಿಯನ್ನು ಸಾಧಿಸಲಾಗಿದೆ.

ವಲಯ	ವರ್ಷ	ನೀರಾವರಿ ಸೌಲಭ್ಯ ಒದಗಿಸಿರುವ ಅಚ್ಚು ಕಟ್ಟು (ಹೆ. ಗಳಲ್ಲಿ)	ಕಾಮಗಾರಿಗಳಿಗೆ ಆದ ವೆಚ್ಚ (ಲಕ್ಷ ರೂ.ಗಳಲ್ಲಿ)
ದಕ್ಷಿಣ ವಲಯ	1997-98	1610	2482.60
	1998-99	1019	2658.90
	1999-2000	1293	2963.79
ಉತ್ತರ ವಲಯ	1997-98	3178	3435.34
	1998-99	2248	5694.22
	1999-2000	2709	6209.89
ಒಟ್ಟು		**12056**	**23494.74**

ನೀರಾವರಿ ಇಲಾಖೆಯಲ್ಲಿನ ಸಿಬ್ಬಂದಿ ವರ್ಗ

3217 - ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಬೃಹತ್ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭಾರಿ ನೀರಾವರಿ ಇಲಾಖೆಯಲ್ಲಿ ಇರುವ ಚೀಫ್ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು?*

ಆ) *ಪ್ರತಿಯೊಂದು ಚೀಫ್ ಇಂಜಿನಿಯರ್‌ಗಳ ಕೆಳಗಿರುವ ಸಿಬ್ಬಂದಿಯ ಹಾಗೂ ಉಳಿದ ಸೇವಾ ಸಿಬ್ಬಂದಿಯ ಸಂಖ್ಯೆ ಎಷ್ಟು? ಪ್ರತಿ ತಿಂಗಳು ಅವರುಗಳಿಗೆ ನೀಡುವ ಒಟ್ಟು ಸಂಬಳ ಎಷ್ಟು?*

ಇ) *ಪ್ರತಿಯೊಂದು ಇಂಜಿನಿಯರಿಂಗ್ ವಿಭಾಗದ ಆಡಳಿತದ ಖರ್ಚು ಎಷ್ಟು?*

ಈ) *ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತಿಯೊಂದು ವಿಭಾಗದ ಚೀಫ್ ಇಂಜಿನಿಯರ್‌ಗಳ ಮಾಡಿರುವ ಪ್ರಮುಖ ಅಭಿವೃದ್ಧಿ ಕಾರ್ಯಗಳು ಯಾವುವು ಮತ್ತು ಅವುಗಳಿಗೆ ಮಾಡಲಾದ ಖರ್ಚು ಎಷ್ಟು?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) 16

ಆ) ಒಟ್ಟು - 14,120 ಪ್ರತಿ ತಿಂಗಳು ಅವರುಗಳಿಗೆ ನೀಡುವ ಒಟ್ಟು ಸಂಬಳ ರೂ. 1204.24 ಲಕ್ಷಗಳು.

ಇ) ಆಡಳಿತದ ಖರ್ಚಿನ ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.

ಈ) ಪ್ರತ್ಯೇಕವಾಗಿ ಅನುಬಂಧ -2 ರಲ್ಲಿ ನೀಡಲಾಗಿದೆ.